ಸಾಕ್ಷಿಗೆ ದಿನಾಂಕ 12.02.2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಗಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

1. ಸಾಕ್ಷಿದಾರರು ಈ ದಿನ ಒಂದು ಮುದ್ರೆಯನ್ನು ಹಾಜರು ಪಡಿಸಿ ಸದರಿ ಮುದ್ರೆಯನ್ನು ದಿನಾಂಕ 03.09.2024 ರಂದು ಮಹಜರು ಸಮಯದಲ್ಲಿ ನೀಡಿದ್ದಾಗಿ ತಿಳಿಸುತ್ತಾರೆ. ಸದರಿ ಮುದ್ರೆಯನ್ನು ಮು ಮಾಲು 1 ಎಂದು ಗುರುತಿಸಲಾಯಿತು. ಸದರಿ ಮುದ್ರೆ 'MS' ಎಂದು ಇರುತ್ತದೆ.

ಪಾಟೀ ಸವಾಲುಃ *2* ನೇ ಆರೋಪಿತನ ಪರ ಶ್ರೀ ಎನ್ .ಎ. ವಕೀಲರಿಂದಃ

2. ತಹಸೀಲ್ದಾರ್ ರವರು ಮಹಜರಿಗೆ ಸಾಕ್ಷಿಯಾಗಿ ಹೋಗುವಂತೆ ಮೌಖಿಕವಾಗಿ ತಿಳಿಸಿದ್ದಾರೆ. ಅವರು ತಿಳಿಸಿದಾಗ ಸಮಯ ಮಧ್ಯಾಹ್ನ 1.00 ಗಂಟೆ ಆಗಿತ್ತು. ಆಗ ನಾನು ತಾಲ್ಲೂಕು ಕಛೇರಿಯಲ್ಲಿ ಇದ್ದೆ. ತಾಲ್ಲೂಕು ಕಛೇರಿಯಿಂದ ಪೋಲೀಸ್ ಠಾಣೆ ಸುಮಾರು 800 ಮೀಟರ್ ದೂರದಲ್ಲಿದೆ. ಠಾಣೆಗೆ ಸುಮಾರು 1.15 ನಿಮಿಷಕ್ಕೆ ಹೋದೆ. ದಾಳಿಗೆ ಹೋಗುವ ವಿಷಯವನ್ನು ಸರ್ಕಲ್ ಇನ್ಸ್ ಪೆಕ್ಟರ್ ನವೀನ್ ಕುಮಾರ್ ರವರು ತಿಳಿಸಿದರು. ಠಾಣೆಯನ್ನು ಮಧ್ಯಾಹ್ನ ಸುಮಾರು 1.30 ಕ್ಕೆ ಬಿಟ್ಟೆ, ಠಾಣೆಯಿಂದ 2 ಜೀಪುಗಳಲ್ಲಿ ಹೊರಟೆವು. ನಾನು, ಗ್ರಾಮ ಸಹಾಯಕ ಮತ್ತು 5 ಜನ ಪೋಲೀಸ್ ಸಿಬ್ಬಂದಿ ಇದ್ದೆವು. ಸದರಿ 5 ಜನ ಪೋಲೀಸ್ ಸಿಬ್ಬಂದಿಯ ಎಲ್ಲರ ಹೆಸರು ಹೇಳಲು ಬರುವುದಿಲ್ಲ. ಪಾರಾಂಡಹಳ್ಳಿಯ ಕ್ರಿಕೆಟ್ ಮೈದಾನದ ಹತ್ತಿರ ಹೋಗುವುದಿದೆ ಎಂದು ಸಿಪಿಐ ರವರು ಹೇಳಿದರು. ಠಾಣೆಯಿಂದ ಸದರಿ ಸ್ಥಳ 2 ಕಿ.ಮೀ ದೂರದಲ್ಲಿದೆ. ಅಲ್ಲಿಗೆ ಹೋದಾಗ ಸಮಯ ಮಧ್ಯಾಹ್ನ ಅಂದಾಜು 1.40 ಆಗಿತ್ತು. ವಾಹನಗಳನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿದೆವು. ಜೀಪು ನಿಲ್ಲಿಸಿದ ಸ್ಥಳದಿಂದ ದಾಳಿ ಮಾಡಿದ ಸ್ಥಳ ಸುಮಾರು 100 ಮೀಟರ್ ಒಳಗೆ ಇತ್ತು. 100 ಮೀಟರ್ ದೂರ ಇರುವುದರಿಂದ ಅಲ್ಲಿ ಏನು ನಡೆಯುತ್ತಿದೆ ಮತ್ತು ಯಾರ್ಯಾರು ಇದ್ದಾರೆ ಎಂದು ಗುರುತಿಸಲು ಆಗುತ್ತಿರಲಿಲ್ಲ ಎಂದರೆ ಸರಿ.

3. ನೀವೆಲ್ಲರೂ ಜೀಪಿನಿಂದ ಒಟ್ಟಿಗೆ ಹೋಗಿದ್ದೀರಾ ಅಥವಾ ಮೊದಲೇ ಸ್ಥಳ ಗುರುತಿಸಿದ್ದೀರಾ ಎಂದರೆ ಸಾಕ್ಷಿದಾರರು ಸಿಪಿಐ ರವರು ಒಬ್ಬ ಪೋಲೀಸ್ ಕಾನ್ಸ್ಟೇಬಲ್ ನ್ನು

ನೋಡಿಕೊಂಡು ಬರಲು ಕಳುಹಿಸಿದ್ದರು ಮತ್ತು ಆ ಕಾನಿಸ್ಟೇಬಲ್ ರವರು ಹೋಗಿ ಓಡಿ ಹೋಗುತ್ತಿದ್ದಾರೆ ಬನ್ನಿ ಎಂದು ಕರೆದರು ಎಂದು ಹೇಳುತ್ತಾರೆ. ಕ್ರಿಕೆಟ್ ಮೈದಾನದಲ್ಲಿ ಯಾರೂ ಇರಲಿಲ್ಲ. ಆರೋಪಿತರು ಕ್ರಿಕೆಟ್ ಮೈದಾನದ ಹೊರಗಡೆ ಇದ್ದರು. ಅಲ್ಲಿ ಬೇರೆ ಬೇರೆ ಜನ ಇದ್ದರಾ ಎಂದರೆ ಸಾಕ್ಷಿದಾರರು ಆ ಕಡೆಗೆ ದೂರಿದಲ್ಲಿ ಕೆಲವು ಜನ ದನ ಮೇಯಿಸುತ್ತಿದ್ದರು ಎನ್ನುತ್ತಾರೆ.

4. ನೀವು ಹೋಗುವುದರೊಳಗೆ ಅವರು ಓಡಿ ಹೋಗಿದ್ದರಾ ಅಥವಾ ಅಲ್ಲಿಯೇ ಇದ್ದರಾ ಎಂದರೆ ಸಾಕ್ಷಿದಾರರು ಓಡಿ ಹೋಗುವ ಪ್ರಯತ್ನ ಮಾಡಿದರು, ಮೊದಲು ಒಬ್ಬ ಪಿಸಿ ಒಬ್ಬ ಆರೋಪಿಯನ್ನು ಹಿಡಿದರು, ನಂತರ ಜೀಪಿನಲ್ಲಿದ್ದ ಇನ್ನೂ ಮೂವರು ಹೋಗಿ ಇನ್ನೊಬ್ಬ ಆರೋಪಿಯನ್ನು ಹಿಡಿದರು ಎನ್ನುತ್ತಾರೆ. ಮೊದಲು ಒಬ್ಬ ಆರೋಪಿಯನ್ನು ಹಿಡಿದ ಎಂದು ಹೇಳಿದ ಆ ಪೋಲೀಸ್ ಪೇದೆಯ ಹೆಸರು ಏನು ಎಂದರೆ ಸಾಕ್ಷಿದಾರರು ಆತನ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಆ ಪೋಲೀಸ್ ಪೇದೆ ಇಬ್ಬರು ಆರೋಪಿತರಲ್ಲಿ ಯಾರನ್ನು ಹಿಡಿದ ಎಂದು ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿದಾರರು ನಾನು ಹೋಗುವುದರೊಳಗೆ ಇಬ್ಬರು ಆರೋಪಿತರನ್ನು ಪೋಲೀಸ್ ಪೇದೆಯವರು ಹಿಡಿದಿದ್ದರು, ಆದ್ದರಿಂದ ಯಾವ ಆರೋಪಿಯನ್ನು ಆ ಪೋಲೀಸ್ ಪೇದೆ ಹಿಡಿದಿದ್ದರು ಎಂದು ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಇನ್ನೊಬ್ಬ ಆರೋಪಿಯನ್ನು ಯಾವ ಪೇದೆಯವರು ಹಿಡಿದಿದ್ದಾರೆ ಎಂದು ಸಹಾ ಹೇಳಲಾಗುವುದಿಲ್ಲ.

5. ಆರೋಪಿತರು ಹಿಡಿದಿದ್ದ ಚೀಲ ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲ ಇತ್ತು. ಅದರ ಮೇಲೆ ಏನಾದರೂ ಪ್ರಿಂಟ್ ಇತ್ತಾ ಅಥವಾ plain ಆಗಿತ್ತಾ ಎಂದರೆ ಸಾಕ್ಷಿದಾರರು ನೆನಪಿಲ್ಲ ಎನ್ನುತ್ತಾರೆ. ಆ ಚೀಲವನ್ನು ಬಿಚ್ಚಿ ತೋರಿಸಿಲ್ಲ ಎಂದರೆ ಸರಿಯಲ್ಲ. ಡಿವೈಎಸ್.ಪಿ ರವರು ಬಂದ ಮೇಲೆ ಅದನ್ನು ಬಿಚ್ಚಿ ತೋರಿಸಿದ್ದಾರೆ. ಅದರಲ್ಲಿ ಒಣ ಸೊಪ್ಪು, ಕಡ್ಡಿ, ಸ್ವಲ್ಪ ಹೂವು ತರಹ ಇತ್ತು. ಆ ಸೊಪ್ಪು ಗಾಂಜಾ ಎಂದು ನಿಮಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಅದರಿಂದ ಘಾಟು ವಾಸನೆ ಬರುತ್ತಿತ್ತು ಎನ್ನುತ್ತಾರೆ. ಅದನ್ನು ಪೋಲೀಸರು ನನ್ನ ಸಮಕ್ಷಮ ತೂಕ ಮಾಡಿದ್ದಾರೆ. ಆ ತೂಕ ಮಾಡುವ ಮಷಿನ್ ನನ್ನು ಠಾಣೆಯಿಂದ ತಂದಿದ್ದರು. ಮಹಜರನ್ನು ಟೈಪ್ ಮಾಡಿ ಅಲ್ಲೇ ನನ್ನ ಸಹಿ ಪಡೆದಿದ್ದಾರೆ. ಅದಕ್ಕೆ ಗ್ರಾಮ ಸಹಾಯಕರು ಸಹಾ ಸಹಿ ಮಾಡಿದ್ದಾರೆ. ಸದರಿ ಮಹಜರಿಗೆ ಮತ್ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿದಾರರು ಸಿಪಿಐ ರವರು ಮತ್ತು ಅವರ ಸಿಬ್ಬಂದಿ ಸಹಿ ಮಾಡುತ್ತಿದ್ದರು ಎನ್ನುತ್ತಾರೆ. ಮಹಜರು ಮುಗಿಯಲು ಸಮಯ ಮಧ್ಯಾಹ್ನ 3.30 ಆಗಿತ್ತು.

6. ಪೋಲೀಸರು ಪುನಃ ನನ್ನನ್ನು ವಿಚಾರಿಸಿಲ್ಲ. ನಾನು ಎಲ್ಲಾ ದಾಖಲೆಗಳಿಗೆ ಪೋಲೀಸ್ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸೃಷ್ಟಿ ಮಾಡಿದ ದಾಖಲೆಗಳಿಗೆ ಅನುಗುಣವಾಗಿ ನನ್ನನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಲಾಗಿದೆ ಎಂದರೆ ಸರಿಯಲ್ಲ. ದಾಳಿ ಮಾಡುವ ಉದ್ದೇಶದಿಂದ ನನ್ನನ್ನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಆರೋಪಿತರು ಯಾರೂ ಇರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತುಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಮು ಮಾಲು 1 ಸೀಲ್ ದಿನಾಂಕ 03.09.2024 ರಿಂದ ಇಲ್ಲಿಯವರೆಗೆ ಪೋಲೀಸರ ವಶದಲ್ಲಿಯೇ ಇತ್ತು ಎಂದರೆ ಸರಿಯಲ್ಲ. ಕಳೆದ ಬಾರಿ ನನ್ನ ವಿಚಾರಣೆ ಆದ ಮೇಲೆ ನಾನು ಆ ಸೀಲನ್ನು ಪೋಲೀಸರಿಂದ ಪಡೆದುಕೊಂಡು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ (1 ನೇ ಆರೋಪಿ ಪರ ವಕೀಲರು ಗೈರು ಹಾಜರು. 1 ನೇ ಆರೋಪಿಗೆ ಕೇಳಲಾಗಿ ತನ್ನ ವಕೀಲರು ಕೇಸನ್ನು ವಾಪಸ್ಸು ಕೊಟ್ಟಿದ್ದಾರೆ ಮತ್ತು ತನಗೆ ವಕೀಲರನ್ನು ನೇಮಕ ಮಾಡಿಕೊಳ್ಳಲು ಅವಕಾಶ ನೀಡಬೇಕೆಂದು ಕೋರುತ್ತಾರೆ. ಕಳೆದ ಬಾರಿ ವಿಚಾರಣೆಯ ದಿನಾಂಕವನ್ನು ನಿಗದಿ ಪಡಿಸಿದಾಗ 1 ನೇ ಆರೋಪಿಯು ತಾನು ವಕೀಲರನ್ನು ಬದಲಾಯಿಸುವ ಬಗ್ಗೆ ತಿಳಿಸಿರಲಿಲ್ಲ. ಆದ್ದರಿಂದ ಆತನ ಕಾರಣಗಳನ್ನು ಒಪ್ಪಲು ಬರುವುದಿಲ್ಲ. ಆದರೂ ಸಹಾ ನ್ಯಾಯಾದ ಹಿತದೃಷ್ಟಿಯಿಂದ ಆತನ ಪರವಾಗಿ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು)

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ**,** ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.**)**

**ಓ. ಹೇ. ಕೇ. ಸ. ಇದೆ,**

**(**ವಿಜಯಕುಮಾರ್ ಎಂ. ಆನಂದಶೆಟ್ಟಿ**)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ